# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು** | : | **ಶ್ರೀ ಮುನಿರಾಜುಗೌಡ ಪಿ.ಎಂ.** |
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **1023** |
| **ಉತ್ತರಿಸಬೇಕಾದ ದಿನಾಂಕ** | : | **27-12-2022** |
| **ಉತ್ತರಿಸಬೇಕಾದ ಸಚಿವರು** | : | **ಸಹಕಾರ ಸಚಿವರು** |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿರುವ ಒಟ್ಟು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳ ಮತ್ತು ಸದರಿ ಸಂಘದಲ್ಲಿರುವ ಸದಸ್ಯರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ದಿ.31-3-2022 ರ ಅಂತ್ಯಕ್ಕೆ ಇದ್ದಂತೆ ಒಟ್ಟು 6,040 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ನೊಂದಣಿಯಾಗಿದ್ದು, ಇವುಗಳ ಪೈಕಿ 5,878 ಸಂಘಗಳು ಕಾರ್ಯನಿರತ ಮತ್ತು 162 ಸಂಘಗಳು ಸ್ಥಗಿತ/ಸಮಾಪನೆಗೆ ಒಳಪಟ್ಟಿರುತ್ತವೆ. ಈ ಕಾರ್ಯನಿರತ ಸಂಘಗಳಲ್ಲಿ ಒಟ್ಟು 59,05,422 ಸದಸ್ಯರಿರುತ್ತಾರೆ. ಜಿಲ್ಲಾವಾರು ವಿವರವನ್ನು **ಅನುಬಂಧ**ದಲ್ಲಿ ಲಗತ್ತಿಸಿದೆ. |
| (ಆ) | ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳಲ್ಲಿ ಪಾರದರ್ಶಿಕತೆ ಮತ್ತು ಉತ್ತರದಾಯಿತ್ವವನ್ನು ತರಲು ಸರ್ಕಾರ ಕೈಗೊಂಡ ಕ್ರಮಗಳೇನು; | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಪ್ರಜಾಪ್ರಭುತ್ವ ವ್ಯವಸ್ಥೆಯ ತತ್ವಗಳಡಿಯಲ್ಲಿ ರಚನೆಯಾಗಿರುವ ಸಂಘಗಳಾಗಿರುತ್ತವೆ. ಆ ಮೂಲಕ ಅವುಗಳು ಸ್ವತಂತ್ರವಾಗಿ ಕೆಲಸ ನಿರ್ವಹಿಸಲು ಅನುಕೂಲ ಮಾಡಿಕೊಡಲಾಗಿದೆ. ಅದರಲ್ಲಿಯೂ 1998 ರಲ್ಲಿ ಪ್ರೊ. ವೈದ್ಯನಾಥನ್ ಸಮಿತಿ ವರದಿಯ ಅನುಷ್ಠಾನದ ಮೂಲಕ ಈ ಸಂಘಗಳು ಸ್ವತಂತ್ರ ಮತ್ತು ಸ್ವಾಯತ್ತ ಸಂಸ್ಥೆಗಳೆಂದು ಪರಿಗಣಿಸಲ್ಪಟ್ಟಿರುತ್ತವೆ.<br><br>ಆದಾಗ್ಯೂ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ನಿಯಮ 1960 ರಡಿಯಲ್ಲಿ ಇವುಗಳು ಯಾವ ರೀತಿ ಕಾರ್ಯನಿರ್ವಹಿಸಬೇಕು ಎಂಬ ಬಗ್ಗೆ ವಿಶ್ಲೇಷಿಸಲಾಗಿದೆ. ಅಂದರೆ ಸದಸ್ಯತ್ವ ಪಡೆಯುವ ಬಗ್ಗೆ ಕಲಂ 16 ಮತ್ತು 17 ರಲ್ಲಿ ಹಾಗೂ ನಿಯಮ 7 ಮತ್ತು 8 ರಲ್ಲಿ ವಿಶ್ಲೇಷಿಸಲಾಗಿದೆ. ಅದೇ ರೀತಿಯಾಗಿ ಆಡಳಿತ ಮಂಡಳಿ ರಚನೆ ಬಗ್ಗೆ ಕಲಂ 28-ಎ ರಲ್ಲಿ, ಚುನಾವಣೆ ನಡೆಯುವ ಬಗ್ಗೆ ಕಲಂ 39-ಎ ರಲ್ಲಿ ಹಾಗೂ ಚುನಾವಣೆ ಪ್ರಕ್ರಿಯೆಯನ್ನು ನಡೆಸುವ ಬಗ್ಗೆ ನಿಯಮ 13 ರಿಂದ ನಿಯಮ 14-ಎಜೆ ಯವರೆಗೆ ವಿವರವಾಗಿ ವಿಶ್ಲೇಷಿಸಲಾಗಿದೆ. ಅಲ್ಲದೇ ಇವುಗಳಲ್ಲಿ ಅವ್ಯವಹಾರಗಳು, ಅಕ್ರಮಗಳು ನಡೆದ ಸಂದರ್ಭದಲ್ಲಿ ಸಂಬಂಧಿಸಿದವರ ವಿರುದ್ಧ ಕ್ರಮಕೈಗೊಳ್ಳಲು ಕಾಯ್ದೆ ಕಲಂ 29-ಸಿ, 30, 31, ಕಲಂ 63, 64 ಮತ್ತು 65 ಗಳಲ್ಲಿ ಹಾಗೂ ಕಲಂ 103, ಕಲಂ 109 ರಲ್ಲಿ ವಿಶ್ಲೇಷಿಸಲಾಗಿದೆ ಹಾಗೂ ಇಲಾಖಾಧಿಕಾರಿಗಳಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ. ಇದಲ್ಲದೇ ಸರ್ಕಾರ ಮತ್ತು ಸಹಕಾರ ಸಂಘಗಳ ನಿಬಂಧಕರು ಕಾಲಕಾಲಕ್ಕೆ ಅಧಿಸೂಚನೆ ಮತ್ತು |

| | | |
|---|---|---|
| | | ಸುತ್ತೋಲೆಗಳನ್ನು ಹೊರಡಿಸುವುದರ ಮೂಲಕ ಎಲ್ಲಾ ವರ್ಗದ ಸಂಘಗಳು ಕ್ರಮಬದ್ಧವಾಗಿ ಕೆಲಸ ನಿರ್ವಹಿಸಲು ಸೂಚನೆಗಳನ್ನು ನೀಡಲಾಗುತ್ತಿದೆ.<br><br>ಈ ಮೇಲಿನಂತೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ನಿರ್ವಹಿಸಲು ಸರ್ಕಾರ ಅಗತ್ಯ ಎಲ್ಲಾ ಕ್ರಮಗಳನ್ನು ಕೈಗೊಂಡಿರುತ್ತದೆ. |
| ಇ) | ರಾಜ್ಯದಲ್ಲಿರುವ ಎಷ್ಟು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳನ್ನು ಕಂಪ್ಯೂಟರೀಕರಣ ಗೊಳಿಸಲಾಗಿದೆ; ಉಳಿದ (ಪಿ.ಎ.ಸಿ.ಎಸ್) ಗಳನ್ನು ಯಾವ ಕಾಲಮಿತಿಯಲ್ಲಿ ಕಂಪ್ಯೂಟರೀಕರಣ ಮಾಡಲಾಗುವುದು ? | ರಾಜ್ಯದ ಒಟ್ಟು 5878 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಪೈಕಿ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉಡುಪಿ ಜಿಲ್ಲೆಯ ಎಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಹಾಗೂ ಉತ್ತರ ಕನ್ನಡ ಮತ್ತು ಕೊಡಗು ಜಿಲ್ಲೆಯ ಕೆಲವೊಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಅವರ ಸ್ವಂತ ಬಂಡವಾಳದಲ್ಲಿ ಹಾಗೂ ಅವರ ವ್ಯವಹಾರಕ್ಕನುಗುಣವಾಗಿ ಕಂಪ್ಯೂಟರೀಕರಣವನ್ನು ಅಳವಡಿಸಿಕೊಂಡು ಕೆಲಸ ನಿರ್ವಹಿಸುತ್ತಿವೆ. ಇದಲ್ಲದೇ ಉತ್ತರ ಕರ್ನಾಟಕ ಹಾಗೂ ದಕ್ಷಿಣ ಕರ್ನಾಟಕದ ಬಹಳ ಕಡಿಮೆ ಸಂಖ್ಯೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಕಂಪ್ಯೂಟರೀಕರಣಗೊಂಡು ಕೆಲಸ ನಿರ್ವಹಿಸುತ್ತಿವೆ.<br><br>ಇಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ರಾಜ್ಯದ ಎಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಏಕಮಾದರಿಯ ತಂತ್ರಾಂಶವನ್ನು ಅಳವಡಿಸುವುದರ ಮೂಲಕ ಕಂಪ್ಯೂಟರೀಕರಣಗೊಳಿಸಲು ಸುತ್ತೋಲೆ ಸಂಖ್ಯೆ: ಎಲ್-12013/2021-ಐ ಅಂಡ್ ಪಿ ದಿ.30-6-2022 ರಲ್ಲಿ ಘೋಷಿಸಿರುತ್ತದೆ. ಅದರಂತೆ ಕಂಪ್ಯೂಟರೀಕರಣಗೊಳಿಸಲು ವೆಚ್ಚವಾಗುವ ಒಟ್ಟು ಮೊತ್ತದ ಶೇ.60 ರಷ್ಟನ್ನು ಕೇಂದ್ರ ಸರ್ಕಾರ ಮತ್ತು ಉಳಿದ ಶೇ.40 ರಷ್ಟು ರಾಜ್ಯ ಸರ್ಕಾರ ಭರಿಸಬೇಕು ಎಂಬುದಾಗಿರುತ್ತದೆ. ಈ ನಿಟ್ಟಿನಲ್ಲಿ ಈಗಾಗಲೇ ರಾಜ್ಯದ 5,494 ಸಂಖ್ಯೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಕಂಪ್ಯೂಟರೀಕರಣಗೊಳಿಸಲು ಅರ್ಹ ಸಂಘಗಳೆಂದು ಗುರುತಿಸಿ ಕೇಂದ್ರ ಸರ್ಕಾರಕ್ಕೆ ವರದಿಸಲಾಗಿದೆ. ಸರ್ಕಾರದ ಯೋಜನೆಯ ರೀತ್ಯಾ ದಿ.31-3-2025 ರೊಳಗೆ ಪೂರ್ಣ ಕಂಪ್ಯೂಟರೀಕರಣಗೊಳಿಸಬೇಕು ಎಂಬುದು ಸರ್ಕಾರದ ಉದ್ದೇಶವಾಗಿರುತ್ತದೆ. |

**ಸಂಖ್ಯೆ: ಸಿಒ 450 ಸಿಎಲ್ಎಸ್ 2022**

**(ಎಸ್.ಟಿ.ಸೋಮಶೇಖರ್)**
**ಸಹಕಾರ ಸಚಿವರು**

6 ನುಬಂಧ

ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಮುನಿರಾಜು ಗೌಡ ಪಿ.ಎಂ (ವಿಧಾನಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ ಅನುಬಂಧ

**ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಸದಸ್ಯರ ವಿವರ**

| ಕ್ರ.ಸಂ. | ಜಿಲ್ಲೆ | ಒಟ್ಟು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳ ಸಂಖ್ಯೆ | ಈ ಪೈಕಿ | | ಸದಸ್ಯರ ಸಂಖ್ಯೆ |
|---|---|---|---|---|---|
| | | | ಕಾರ್ಯನಿರತ | ಸ್ಥಗಿತ/ಸಮಾಪನೆ | |
| 1 | ಬೆಂಗಳೂರು ನಗರ ಜಿಲ್ಲೆ | 46 | 39 | 7 | 59177 |
| 2 | ಬೆಂ. ಗ್ರಾಮಾಂತರ | 78 | 69 | 9 | 131027 |
| 3 | ರಾಮನಗರ | 98 | 97 | 1 | 139519 |
| 4 | ತುಮಕೂರು | 242 | 239 | 3 | 571626 |
| 5 | ಕೋಲಾರ | 104 | 95 | 9 | 168227 |
| 6 | ಚಿಕ್ಕಬಳ್ಳಾಪುರ | 159 | 125 | 34 | 106897 |
| 7 | ಚಿತ್ರದುರ್ಗ | 165 | 158 | 7 | 303832 |
| 8 | ದಾವಣಗೆರೆ | 181 | 180 | 1 | 236313 |
| 9 | ಶಿವಮೊಗ್ಗ | 176 | 173 | 3 | 264237 |
| 10 | ಮೈಸೂರು | 201 | 189 | 12 | 205894 |
| 11 | ಚಾಮರಾಜನಗರ | 105 | 104 | 1 | 126628 |
| 12 | ಮಂಡ್ಯ | 236 | 236 | 0 | 413121 |
| 13 | ಹಾಸನ | 228 | 216 | 12 | 344273 |
| 14 | ಚಿಕ್ಕಮಗಳೂರು | 129 | 129 | 0 | 212702 |
| 15 | ಕೊಡಗು | 76 | 76 | 0 | 137333 |
| 16 | ದಕ್ಷಿಣಕನ್ನಡ | 122 | 121 | 1 | 695588 |
| 17 | ಉಡುಪಿ | 57 | 57 | 0 | 463724 |
| 18 | ಬೆಳಗಾವಿ | 1318 | 1297 | 21 | 609043 |
| 19 | ವಿಜಯಪುರ | 290 | 289 | 1 | 367551 |
| 20 | ಬಾಗಲಕೋಟೆ | 284 | 281 | 3 | 389044 |
| 21 | ಧಾರವಾಡ | 166 | 162 | 4 | 124606 |
| 22 | ಗದಗ | 179 | 173 | 6 | 112751 |
| 23 | ಹಾವೇರಿ | 231 | 228 | 3 | 241477 |
| 24 | ಉತ್ತರ ಕನ್ನಡ | 179 | 176 | 3 | 290389 |
| 25 | ಬೀದರ | 189 | 188 | 1 | 208211 |
| 26 | ಬಳ್ಳಾರಿ | 197 | 188 | 9 | 359586 |
| 27 | ರಾಯಚೂರು | 140 | 136 | 4 | 157945 |
| 28 | ಕೊಪ್ಪಳ | 125 | 121 | 4 | 144224 |
| 29 | ಕಲಬುರಗಿ | 231 | 231 | 0 | 231472 |
| 30 | ಯಾದಗಿರಿ | 108 | 105 | 3 | 69860 |
| | | 6040 | 5878 | 162 | 5905422 |

Sarala

Assistant Registrar of Cooperative Societies
(Credit)
No.1, Ali Askar Road, Bengaluru - 560 052.